# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಾರ್ಪೋರೇಟ್ ಐಡೆಂಟಿಫಿಕೇಷನ್ ಸಂಖ್ಯೆ: (CIN) : U40109KA2004SGC035177

ನಿಗಮದ ನೋಂದಾಯಿತ ಕಛೇರಿ ವಿಳಾಸ: ನಂ.29,
3ನೇ ಮಹಡಿ, ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ,
ವಿಜಯನಗರ, 2ನೇ ಹಂತ, ಮೈಸೂರು-570017
ನಿಗಮದ ವೆಬ್‌ಸೈಟ್ ವಿಳಾಸ www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರ
ಕಛೇರಿ, ಕಾರ್ಯ ಮತ್ತು ಪಾಲನಾ ಉಪ-ವಿಭಾಗ,
ಸೋಮವಾರಪೇಟೆ -571236
ದೂರವಾಣಿ: 08276-282005 /9449598612
ಇಮೇಲ್: aeecescsomwarpet@gmail.com

ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಸೋಪೇಟೆ/2019-20/ ದಿನಾಂಕ:

## ಜನ ಸಂಪರ್ಕ ಸಭೆಯ ನಡಾವಳ

ದಿನಾಂಕ 18.06.2019 ಮಂಗಳವಾರ ಪೂರ್ವಾಹ್ನ 10.00 ಗಂಟೆಯಿಂದ 11.30 ಗಂಟೆಯವರೆಗೆ ಸೆಸ್ಕ್ ಉಪವಿಭಾಗ ಕಛೇರಿ ಸೋಮವಾರಪೇಟೆಯಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಚಾಮರಾಜನಗರ ಕೊಡಗು ವೃತ್ತ ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳ.

**ಉಪಸ್ಥಿತರಿದ್ದ ಅಧಿಕಾರಿಗಳು**

ಶ್ರೀಯುತರುಗಳಾದ

1. ಶ್ರೀ.ಕೆ.ಎಂ.ಮಹದೇವಸ್ವಾಮಿ ಪ್ರಸನ್ನ ಅಧೀಕ್ಷಕ ಇಂಜಿನಿಯರ್(ವಿ) ಚಾಮರಾಜನಗರ ಕೊಡಗು ವೃತ್ತ ಮೈಸೂರು
2. ಶ್ರೀ.ಬಿ.ಸೋಮಶೇಖರ್ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಸೆಸ್ಕ್ ಕಾ ಮತ್ತು ಪಾ ವಿಭಾಗ ಮಡಿಕೇರಿ.
3. ಶ್ರೀ ಧನಂಜಯ್. ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ ಸೋಮವಾರಪೇಟೆ.
4. ಶ್ರೀ.ಸಂತೋಷ್ ಕೆ.ಪಿ ಸಹಾಯಕ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ ಸೋಮವಾರಪೇಟೆ.
5. ಶ್ರೀ ದಯಾನಂದ ಬಿ. ಮೇಲ್ವಿಚಾರಕರು ಸೋಮವಾರಪೇಟೆ ಶಾಖೆ.
6. ಶ್ರೀಮತಿ.ಕವಿತಾ.ಕೆ ಸಹಾಯಕ ಇಂಜಿನಿಯರ್(ತಾಂ) ಪ್ರಭಾರ ಸೆಸ್ಕ್ ಉಪ ವಿಭಾಗ ಸೋಮವಾರಪೇಟೆ
7. ಶ್ರೀ.ಗುಣಶೇಖರ್ ಹಿರಿಯ ಸಹಾಯಕರು ಚಾ.ವಿ.ಸ.ನಿ.ನಿ ಸೋಮವಾರಪೇಟೆ.
8. ಶ್ರೀ.ಬಿ.ಪಿ.ಹೇಮಂತ್‌ಕುಮಾರ್ ಕಿರಿಯ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ ಶನಿವಾರಸಂತೆ.
9. ಶ್ರೀ.ರುಕ್ಮಾಂಗದ ಕುಮಾರ್ ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಶಾಂತಳ್ಳಿ.
10. ಶ್ರೀ.ರಂಗಸ್ವಾಮಿ ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಆಲೂರು ಸಿದ್ದಾಪುರ.
11. ಶ್ರೀ.ಮನುಕುಮಾರ್ ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಕೊಡ್ಲಿಪೇಟೆ.

ಸಭೆಯಲ್ಲಿ ಸೋಮವಾರಪೇಟೆ ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರಮ ಸಂಖ್ಯೆ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ಸಲಹೆ |
|---|---|---|---|
| 1) | ಸಂತೋಷ್ ರೈ ಬಳಗುಂದ ಗ್ರಾಮ | 1)ಜನಸಂಪರ್ಕ ಸಭೆಯ ಬಗ್ಗೆ ಸಾರ್ವಜನಿಕರಿಗೆ ಮಾಹಿತಿಯನ್ನು ತಡವಾಗಿ ನೀಡುತ್ತಿದ್ದು, ಪಂಚಾಯಿತಿ ಆಫೀಸ್‌ಗಳಿಗೆ ಸಭೆಯ ಬಗ್ಗೆ ಮಾಹಿತಿಯನ್ನು ನೀಡಿ ಹೆಚ್ಚಿನ ಪ್ರಚಾರ ಮಾಡಬೇಕೆಂದು ತಿಳಿಸಿದರು.<br>2)ವಿದ್ಯುತ್ ತೊಂದರೆ ಬಗ್ಗೆ ತಿಳಿಸಲು ಕಛೇರಿಗೆ ಸ್ಥಿರ ದೂರವಾಣಿಗೆ ಕರೆ ಮಾಡಿದರೆ ಯಾರೂ ಸ್ವೀಕರಿಸುವುದಿಲ್ಲ ಎಂದು ದೂರಿದರು | 1)ವಾರ್ತಾಧಿಕಾರಿಯವರಿಗೆ 3 ದಿನದ ಹಿಂದೆಯೇ ಪತ್ರ ಬರೆದಿದ್ದು, ರೇಡಿಯೋ ಮತ್ತು ದಿನ ಪತ್ರಿಕೆಗಳಲ್ಲಿ ಪ್ರಚಾರ ನೀಡಲಾಗಿದೆ ಎಂದು ತಿಳಿಸಿದರು.<br>2)ಚಾವಿಸನಿನಿ ವ್ಯಾಪ್ತಿಯಲ್ಲಿ ಗ್ರಾಹಕರ ದೂರಿಗಾಗಿ 1912 ಗೆ ಕರೆ ಮಾಡಿದ್ದಲ್ಲಿ (24*7) ದೂರು ಸ್ವೀಕರಿಸುತ್ತಾರೆ ಹಾಗೂ ಎಲ್ಲಾ ಶಾಖಾಧಿಕಾರಿಗಳ ಹಾಗೂ ವಿಭಾಗಾಧಿಕಾರಿ ಮತ್ತು ಉಪವಿಭಾಗಾಧಿಕಾರಿಗಳ ಮೊಬೈಲ್ ಸಂಖ್ಯೆಗಳಿದ್ದು ಅವುಗಳಗೂ ಕರೆ ಮಾಡಬಹುದು ಎಂದು ತಿಳಿಸಿದರು. |
| 2) | ಸುರೇಶ್ ಶೆಟ್ಟಿ ಜಯಕರ್ನಾಟಕ ಸಂಘ | 1)ಬಿಲ್ಲುಗಳಲ್ಲಿ ASD ಎಂಬ ಹೆಚ್ಚಿನ ಬಿಲ್ಲು ಹಾಕುತ್ತಿದ್ದು, ಕಾರಣ ತಿಳಿಸುವಂತೆ ಕೇಳಿದರು.<br>2)ತುಂಬಾ ವರ್ಷಗಳಿಂದ ಒಂದೇ ಕಡೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ವರ್ಗಾವಣೆಗೊಳಿಸುವ ಬಗ್ಗೆ ಕೇಳಿದರು | 1)ವಿದ್ಯುತ್ ಬಳಕೆಯ ಅನುಗುಣವಾಗಿ ಹೆಚ್ಚುವರಿ ಠೇವಣಿಯು ಖಾತೆಯಲ್ಲಿ ಇರಬೇಕಾಗಿರುವುದರಿಂದ KERC ನಿಯಮದ ಅನುಸಾರ ಪಾವತಿಸುವುದು ಕಡ್ಡಾಯವಾಗಿರುತ್ತದೆ.<br>2)ಕೊಡಗು ಗುಡ್ಡಗಾಡು ಪ್ರದೇಶವಾಗಿದ್ದು ಕರ್ತವ್ಯ ನಿರ್ವಹಿಸಲು ನೌಕರರು ಬರದೇ ಇರುವುದರಿಂದ ವರ್ಗಾವಣೆಗೊಳಸಲಾಗುತ್ತಿಲ್ಲ. ದೂರುಗಳು ಬಂದರೆ ಬೇರೆ ಕಡೆಗೆ ವರ್ಗಾವಣೆಗೊಳಸಲಾಗುವುದು ಎಂದು ತಿಳಿಸಿದರು. |

| | | | |
|---|---|---|---|
| ) | ವಿಜಯ್ ಹಾನಗಲ್ ಪತ್ರಕರ್ತರು | 1)ತೋಳೂರು ಶೆಟ್ಟಳ್ಳಿಯಿಂದ ಕೂತಿ ಗ್ರಾಮಕ್ಕೆ ಹೋಗಿರುವ 11 ಕೆವಿ ಮಾರ್ಗವು ತೋಟದಲ್ಲಿದ್ದು, ರಸ್ತೆ ಬದಿಗೆ ಬದಲಾಯಿಸುವಂತೆ ಈ ಹಿಂದೆಯೇ ತಿಳಿಸಿದ್ದರೂ ಇನ್ನು ಕೆಲಸ ನಿರ್ವಹಿಸಿರುವುದಿಲ್ಲ.<br><br>2)ಕೂತಿ ಶಾಲೆ ಹತ್ತಿರ ವಿದ್ಯುತ್ ಕಂಬ ಬೆಂಡಾಗಿ ಬೀಳುವಂತಿದ್ದು ಸರಿಪಡಿಸಲು ಕೋರಿಕೊಂಡರು. | 1)ಈ ಹಿಂದೆಯೇ ಅಂದಾಜು ಪಟ್ಟಿ ಸಲ್ಲಿಸಿದ್ದು ಅನುದಾನದ ಕೊರತೆಯಿಂದ ಕಾಮಗಾರಿಗೆ ಅನುಮೋದನೆ ಸಿಕ್ಕಿರುವುದಿಲ್ಲ. ಪುನಃ ಅಂದಾಜುಪಟ್ಟಿ ಪರಿಷ್ಕರಿಸಿ ಸಲ್ಲಿಸಿದ್ದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.<br>2) ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಶಾಖಾಧಿಕಾರಿಯವರಿಗೆ ಸೂಚಿಸಿದರು. |
| 4) | ತಿಮ್ಮಯ್ಯ ತಾಕೇರಿ | 1)ತೋಟದೊಳಗೆ ಮತ್ತು ಗದ್ದೆಯಲ್ಲಿ ಲೈನ್ ವೈರ್‌ಗಳು ಜೋತುಬಿದ್ದಿದ್ದು ತಲೆಗೆ ತಾಗುವಂತಿದೆ. ಕಂಬಗಳು ಬೆಂಡಾಗಿದ್ದು, ಶಿಥಿಲಗೊಂಡಿರುತ್ತದೆ . ಕೆಲವು ಸ್ಥಳಗಳಲ್ಲಿ ಟೆಲಿಫೋನ್ ಕಂಬದಲ್ಲಿ ಲೈನಿನ ತಂತಿ ಎಳೆದಿರುವ ಬಗ್ಗೆ ಕೇಳಿದರು. | 1)ತುರ್ತಾಗಿ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.ಮಧ್ಯಂತರ ಕಂಬ ಅಳವಡಿಕೆ ಮತ್ತು ಶಿಥಿಲಗೊಂಡಿರುವ ಕಂಬಗಳನ್ನು ತುರ್ತಾಗಿ ಬದಲಾಯಿಸುವಂತೆ ಶಾಖಾಧಿಕಾರಿಯವರಿಗೆ ಸೂಚಿಸಿದರು. |
| 5) | ದುದ್ದಯ್ಯ ತಲ್ತಾರೆ ಶೆಟ್ಟಳ್ಳಿ ಮತ್ತು ಗ್ರಾಮಸ್ಥರು | 1)ತಲ್ತಾರೆಶೆಟ್ಟಳ್ಳಿ ಗ್ರಾಮದಲ್ಲಿರುವ ಶಿಥಿಲಗೊಂಡಿರುವ ಪರಿವರ್ತಕ ಕೇಂದ್ರವನ್ನು ಬೇರೆ ಸ್ಥಳಕ್ಕೆ ಶಿಫ್ಟ್ ಇದುವರೆಗೂ ಕಾಮಗಾರಿ ನಿರ್ವಹಿಸಿರುವುದಿಲ್ಲ ಎಂದು ಆಗ್ರಹಿಸಿದರು.<br>2)ತಲ್ತಾರೆ ಮುತ್ತಣ್ಣರವರ ಮನೆ ಹತ್ತಿರ ರಸ್ತೆ ಬದಿಯಲ್ಲಿ ಲೈನ್ ತಂತಿಗಳು ಕೈಗೆಟುಕುವಂತಿದ್ದು ಸರಿಪಡಿಸಲು ಕೇಳಿಕೊಂಡರು. | 1)ಅಂದಾಜುಪಟ್ಟಿ ಮಂಜೂರಾತಿಗೊಂಡ ತಕ್ಷಣವೇ ಕಾಮಗಾರಿಯನ್ನು ನಿರ್ವಹಿಸುವಂತೆ ಶಾಖಾಧಿಕಾರಿಯವರಿಗೆ ಸೂಚಿಸಿದರು.<br><br>2)ತುರ್ತಾಗಿ ಸ್ಥಳಪರಿಶೀಲಿಸಿ ಸರಿಪಡಿಸಲು ಶಾಖಾಧಿಕಾರಿಯವರಿಗೆ ಸೂಚಿಸಿದರು.ಅದೇ ದಿನ ಸ್ಥಳಕ್ಕೆ ಭೇಟಿ ನೀಡಿ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.(ಕಾಮಗಾರಿ ಪ್ರಗತಿಯಲ್ಲಿದೆ). |
| 6) | ಎ.ಪಿ.ಸುಬ್ಬಯ್ಯ ಐಗೂರು | 1)ಗೌಡಳ್ಳಿ ಗ್ರಾಮದ ಅಜ್ಜಳ್ಳಿಯಲ್ಲಿರುವ ತಮ್ಮ IP ಸೆಟ್ ಸ್ಥಾವರಕ್ಕೆ ಪ್ರತಿ ತಿಂಗಳ ಬಿಲ್ಲು ವಿತರಿಸದೇ ಒಂದೇ ಸಲ ಹೆಚ್ಚು ಬಿಲ್ಲು ನೀಡಿರುವುದನ್ನು ಸರಿಪಡಿಸಿ ಕೊಡಲು ಕೋರಿದರು. | 1) LT ರೇಟಿಂಗ್ ಮಡಿಕೇರಿರವರು ಮಾಪಕವನ್ನು ಪರಿಶೀಲಿಸಿದ್ದು, ಮಾಪಕ ಸರಿ ಇರುವುದಾಗಿ ತಿಳಿಸಿರುವ ಮೇರೆಗೆ ವಿದ್ಯುತ್ ಬಿಲ್ ಪಾವತಿಸಲು ಸೂಚಿಸಿದರು. |
| 7) | ಕೆ.ಪಿ.ಚಂದ್ರಾಜುಕಿರಗಂದೂರು ಗ್ರಾಮ | 1)ಐಗೂರು ಗ್ರಾಮದಿಂದ ಕಿರಗಂದೂರು ಗ್ರಾಮಕ್ಕೆ ಹೋಗಿರುವ 11ಕೆವಿ ಲೈನ್‌ನ ಕಂಬಗಳು ಕಳೆದ ಮಳೆಗಾಲದಲ್ಲಿ ಉಂಟಾದ ಜಲ ಸ್ಫೋಟಕ್ಕೆ ಮುರಿದಿದ್ದು ಈ ವರ್ಷವು ಮಳೆಗಾಲದಲ್ಲಿ ಹೆಚ್ಚಿನ ಅನಾಹುತ ಸಂಭವಿಸುವುದರಿಂದ ತುರ್ತಾಗಿ ರಸ್ತೆ ಬದಿಗೆ ಲೈನನ್ನು ಬದಲಾಯಿಸುವಂತೆ ಕೋರಿಕೊಂಡರು. | 1)ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಯವರಿಗೆ ಸೂಚಿಸಿದರು. |
| 8) | ಶಾಂತ ಕೊಡ್ಲಿಪೇಟೆ | 1)ನಮ್ಮ ಮನೆಯ ಹತ್ತಿರ ಆನೆ ಗಲಾಟೆ ಇದ್ದು ತುರ್ತಾಗಿ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಕೋರಿಕೊಂಡರು. | 1)ಸೌಭಾಗ್ಯ ಯೋಜನೆಯಡಿ ಅರ್ಜಿ ನೊಂದಣಿ ಮಾಡಿದ್ದು, ಕಂಬ ಅಳವಡಿಸಿ ವಿದ್ಯುತ್ ಸಂಪರ್ಕ ನೀಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 9) | ಟಿ.ಬಿ.ಮುತ್ತಣ್ಣ ಕುಮಾರಳ್ಳಿ ಗ್ರಾಮ | 1)ಸೌಭಾಗ್ಯ ಯೋಜನೆಗೆ ಅರ್ಜಿ ನೊಂದಣಿ ಮಾಡಿದ್ದು, ಸುಮಾರು 5 ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಕೇಳಿಕೊಂಡರು. | 1)ಸೌಭಾಗ್ಯ ಯೋಜನೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. |

ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ.
ಕಾರ್ಯ ಮತ್ತು ಪಾಲನೆ ವಿಭಾಗ
ಮಡಿಕೇರಿ

ಪ್ರತಿಯನ್ನು

1. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾ.ವಿ.ಸ.ನಿ.ನಿ.,ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು(ವಾ) ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯ ನಿರ್ವಾಹಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾ.ವಿ.ಸ.ನಿ.ನಿ., ಮಡಿಕೇರಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾ) ರವರ ತಾಂತ್ರಿಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು.
6. ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನೆ ಉಪವಿಭಾಗ, ಚಾ.ವಿ.ಸ.ನಿ.ನಿ, ಸೋಮವಾರಪೇಟೆ.
7. ಕಚೇರಿ ಪ್ರತಿ.